# ವಂಶಿ-ಬೋನಿ ಚರ್ಚೆಯ ಬೋಣಿ

ಮಲೆಯಾಳಂ ಸಿನಿಮಾ 'ಲಕ್ಕಿ ಭಾಸ್ಕರ್', 'ಪುಷ್ಪಾ–2' ಸದ್ದು ಮಾಡಿರುವ ಈ ಕಾಲಘಟ್ಟದಲ್ಲಿ ದಕ್ಷಿಣದ ಹಾಗೂ ಹಿಂದಿ ಚಿತ್ರರಂಗದ ಇಬ್ಬರು ನಿರ್ಮಾಪಕರ ವಾಗ್ವಾದ ಮಜವಾಗಿದೆ.


ಬೋನಿ ಕಪೂರ್


ನಾಗ ವಂಶಿ

ಬೋನಿ ಕಪೂರ್: ರಷ್ಯಾದಲ್ಲಿ ಈಗಲೂ ರಾಜ್ ಕಪೂರ್ ಜನಪ್ರಿಯರು. ಯುರೋಪ್‌ನಲ್ಲಿ ಅಮಿತಾಭ್ ಬಚ್ಚನ್ ಶಾರುಕ್ ಖಾನ್ ಹೆಸರು ಹೇಳಿದರೆ ಈಗಲೂ ಅಭಿಮಾನಿಗಳಿಗೆ ಸಂಭ್ರಮ. ಮೊರಾಕ್ಕೊ ರಾಜ ಅಮಿತಾಭ್, ಶಾರುಕ್ ಇಬ್ಬರಿಗೂ ಸನ್ಮಾನ ಮಾಡಿದ್ದರು. ಅಮೆರಿಕದಲ್ಲಿ ತೆಲುಗು ಸಿನಿಮಾಗಳಿಗೆ ಈಗ ಒಳ್ಳೆಯ ಮಾರುಕಟ್ಟೆ ಇದೆ. ಸಿಂಗಪುರ, ಮಲೇಷ್ಯಾದಲ್ಲಿ ತಮಿಳು ಸಿನಿಮಾ ಸ್ವೀಕರಿಸುವವರ ಸಂಖ್ಯೆ ದೊಡ್ಡದು.

ನಾಗ ವಂಶಿ: ಲಕ್ಕಿ ಭಾಸ್ಕರ್ ಮಲೆಯಾಳಂ ಸಿನಿಮಾಗೆ ಕೆಲವು ದೇಶಗಳಲ್ಲಿ ಒಳ್ಳೆಯ ಮಾರುಕಟ್ಟೆ ಸಿಕ್ಕಿತು. ಬಾಲಿವುಡ್‌ನವರು ಜುಹು, ಬಾಂದ್ರಾದವರಿಗೆ ಮಾತ್ರ ಸಿನಿಮಾ ಮಾಡುತ್ತಿದ್ದರು. ಅದಕ್ಕೇ ದಕ್ಷಿಣ ಭಾರತದ ಚಿತ್ರಗಳು ಅಲ್ಲಿನ ಸಿನಿಮಾ ತಯಾರಕರ ಆಲೋಚನೆಯನ್ನೇ ಬದಲಿಸಿದ್ದು.

ಬೋನಿ ಕಪೂರ್: ಇದು ಪೂರ್ಣ ಸತ್ಯ ಅಲ್ಲ. 'ಪುಷ್ಪ' ಚಿತ್ರದ ನಾಯಕ ಅಲ್ಲು ಅರ್ಜುನ್ ತಮಗೆ ಅಮಿತಾಭ್ ಬಚ್ಚನ್ ಇಷ್ಟ ಅಂತ ಹೇಳಿದ್ದಾರೆ; ಎನ್‌ಟಿಆರ್ ಇಷ್ಟ ಅಂತ ಹೇಳಲಿಲ್ಲ.

ನಾಗ ವಂಶಿ: ಅವರು ಚಿರಂಜೀವಿ ಕೂಡ ತಮ್ಮ ಮೆಚ್ಚಿನ ನಟ ಅಂತ ಹೇಳಿದ್ದಾರೆ.

ಬೋನಿ ಕಪೂರ್: ಸಿನಿಮಾ ಕ್ಷೇತ್ರದಲ್ಲಿ ಆಗಿರುವ ಒಟ್ಟಾರೆ ಬೆಳವಣಿಗೆಗಳನ್ನು ನಾವು ಚರ್ಚಿಸಬೇಕು.

ನಾಗ ವಂಶಿ: ಬಾಹುಬಲಿ, ಆರ್‌ಆರ್‌ಆರ್, ಅನಿಮಲ್, ಜವಾನ್ ರೀತಿಯ ಸಿನಿಮಾಗಳು ಮಾತ್ರ ಇತ್ತೀಚೆಗೆ ಬಾಲಿವುಡ್ ಪ್ರೇಕ್ಷಕರಿಗೂ ರುಚಿಸಿದ್ದು ಎನ್ನುವುದನ್ನು ಮರೆಯಬಾರದು.

ಹೀಗೆ ನಿರ್ಮಾಪಕರ ಸಂವಾದವೊಂದರಲ್ಲಿ ಮಾತುಕತೆ ಇತ್ತೀಚೆಗೆ ನಡೆಯಿತು. 'ಲಕ್ಕಿ ಭಾಸ್ಕರ್' ಸಿನಿಮಾ ನಿರ್ದೇಶಕ ನಾಗ ವಂಶಿ ದಾಳಿಕೋರ ಧೋರಣೆಯಿಂದ ಹಿಂದಿ ಚಿತ್ರರಂಗದ ಹಳೆಯ ನಿರ್ಮಾಪಕರನ್ನು ಕೆಣಕುತ್ತಲೇ ಹೋದರು. ಸಾಮಾಜಿಕ ಮಾಧ್ಯಮದಲ್ಲಿ ಈಗ ಈ ಚರ್ಚೆಯನ್ನು ಪ್ರೇಕ್ಷಕರು ಮುಂದುವರಿಸಿದ್ದಾರೆ. ■



# ದಕ್ಷಿಣದತ್ತ ಅನುರಾಗ್ ಚಿತ್ತ

'ಸತ್ಯ' ಹಿಂದಿ ಸಿನಿಮಾಗೆ ಚಿತ್ರಕತೆ ಬರೆದಿದ್ದ ಅನುರಾಗ್ ಕಶ್ಯಪ್, 'ಗ್ಯಾಂಗ್ಸ್ ಆಫ್ ವಸೇಪುರ್' ಚಿತ್ರದ ನಿರ್ದೇಶನದ ಮೂಲಕ ಛಾಪು ಮೂಡಿಸಿದವರು. 'ಗುಲಾಲ್' ಹಿಂದಿ ಚಿತ್ರವು ಅವರ ಕೌಶಲದ ಪ್ರಯೋಗಶಾಲೆ ಎಂದೇ ಪರಿಗಣಿತವಾಗಿತ್ತು. ಈಗ ಅವರು ಮುಂಬೈ ಸಹವಾಸವೇ ಬೇಡವೆಂದೂ, ದಕ್ಷಿಣದತ್ತ ಮುಖ ಮಾಡುವುದಾಗಿಯೂ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಹಿಂದಿ ಚಿತ್ರರಂಗದಲ್ಲಿ ಮಧ್ಯಸ್ಥಗಾರರ ಹಾವಳಿ ಹೆಚ್ಚಾಗಿದೆ ಎನ್ನುವುದು ಈ ನಿರ್ದೇಶಕರ ಅನುಭವದ ನುಡಿ. ಇಲ್ಲಿ ಏಜೆನ್ಸಿಗಳು ತಾರೆಗಳನ್ನು ಸೃಷ್ಟಿಸುವ ಭರವಸೆ ನೀಡುತ್ತಿವೆ. ಚಿಕ್ಕ ವಯಸ್ಸಿನ ಹುಡುಗ–ಹುಡುಗಿಯರನ್ನು ಸೆಳೆಯುತ್ತಿವೆ. ಇಂತಹ ಏಜೆನ್ಸಿಗಳು ಅಭಿನಯದ ಕಮ್ಮಟಕ್ಕೆ ಕಳುಹಿಸುವುದಿಲ್ಲ; ಜಿಮ್ ಸೇರಲು ಪುಸಲಾಯಿಸುತ್ತವೆ. ಹಣವನ್ನು ಹೀರಿ, ಹಿಂಡಿ ಹಾಕುತ್ತವೆ. ಕೊನೆಗೆ ತಾರೆಗಳಾಗುವ ಕನಸು ಹೊತ್ತವರ ಮನಸ್ಸೂ ಹಾಳಾಗುತ್ತದೆ. ಒಂದು ವೇಳೆ ನಟ ಅಥವಾ ನಟಿ ಆದರೂ ಎಲ್ಲರೂ ಹಣ ಮಾಡುವ ರಹದಾರಿಗಳನ್ನು ಹುಡುಕುತ್ತಾರೆ... ಇದು ಅನುರಾಗ್ ಹೇಳಿರುವ ಕಹಿ ಸತ್ಯ.

ಸಿನಿಮಾ ಮಾಡುವುದು ಈಗ ಸೃಜನಶೀಲ ಪ್ರಕ್ರಿಯೆ ಅಥವಾ ಖುಷಿಯ ಬಾಬತ್ತಾಗಿ ಉಳಿದಿಲ್ಲವೆಂಬ ಅನುಭವವನ್ನೂ ಅವರು ತೆರೆದಿಟ್ಟಿದ್ದಾರೆ. ಒಂದು ಸಿನಿಮಾ ಮಾಡಲು ಮುಂದಾದಾಗ ನಿರ್ದೇಶಕನನ್ನು ಕಥಾವಸ್ತು ಹಾಗೂ ಸೃಷ್ಟಿಕ್ರಿಯೆ ಕುರಿತು ನಿರ್ಮಾಪಕರು ಈಗ ಕೇಳುವುದಿಲ್ಲ; ಸಿನಿಮಾ ಹೇಗೆ, ಎಷ್ಟು ಹಣ ಮಾಡಿಕೊಡುತ್ತದೆ ಎಂಬ ಪ್ರಶ್ನೆ ಹಾಕುತ್ತಾರೆ. ಈಗ ಉಳಿದಿರುವ ಮೊದಲ ತಲೆಮಾರಿನ ನಟ–ನಟಿಯರು ಗಗನಕುಸುಮ. ಅಂತಹವರನ್ನು ಹಾಕಿಕೊಂಡು ಸಿನಿಮಾ ಮಾಡುವುದು ಬಜೆಟ್ ವ್ಯಾಪ್ತಿಯನ್ನು ಮೀರಿದ್ದು. ಅವರನ್ನು ಸಂಭಾಳಿಸುವುದು ಕೂಡ ಬಲು ಕಷ್ಟ ಎಂದಿದ್ದಾರೆ.

ತಮಿಳಿನ 'ಮಹಾರಾಜ' ಹಾಗೂ ಮಲಯಾಳದ 'ರೈಫಲ್ ಗ್ಯಾಂಗ್' ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ ಅನುರಾಗ್ ಅವರಿಗೆ ಅಲ್ಲಿನ ಸಿನಿಮಾ ಸಂಸ್ಕೃತಿಯ ಪರಿಚಯ ಚೆನ್ನಾಗಿ ಆಗಿದೆ. ಸೃಜನಶೀಲತೆಗೆ ದಕ್ಷಿಣ ಭಾರತದ ಸಿನಿಮಾಗಳಲ್ಲಿ ಈಗಲೂ ಅವಕಾಶ ಉಳಿದಿದೆ ಎಂದು ಅರಿವಾಗಿದೆ. ಅದೇ ಕಾರಣಕ್ಕೆ ಅವರು ಅಲ್ಲಿಗೆ ಗುಳೆ ಹೊರಡುವ ಸೂಚನೆಯನ್ನು ಕೊಟ್ಟಿರುವುದು. ಅವರ ಈ ಸೂಚನೆಯು ನಿರ್ಮಾಪಕರಿಗೆ ಆಹ್ವಾನವನ್ನೂ ಅಡಗಿಸಿಕೊಂಡಿದೆ ಎಂದು ವಿಶ್ಲೇಷಿಸುತ್ತಿರುವವರೂ ಇದ್ದಾರೆ. ■